ಇದನ್ನು ಅನುಷ್ಠಾನಕ್ಕೆ ತರಬೇಕಾದರೆ ಲೋಕರ್ ಬಾಡಿ ಸಿ. ಐ. ಟಿ. ಬಿ. ಮತ್ತು ಹೌಸಿಂಗ್ ಬೋರ್ಡ್ ಈ ಮೂರು ಏಜೆನ್ಸಿಗಳು ಇವೆ ಎಂದು ಹೇಳಿದ್ದೀರಿ. ಈ ಮೂರು ಏಜೆನ್ಸಿಗಳಲ್ಲಿ ಒಬ್ಬೊರಿಗೊಬ್ಬರಿಗೆ ಕೋಆರ್ಡಿನೇಷನ್ ಇಲ್ಲದೆ ಪಟ್ಟಣದ ಬೆಳವಣಿಗೆ ಆಗಿಲ್ಲ ಎಂಬುದು ಅರ್ಥವಾಗುವುದಿಲ್ಲವೇ ?

ಶ್ರೀ ಡಿ. ಕೆ. ನಾಯ್ಕರ್.—ಉತ್ತರದಲ್ಲಿ ಚೆನ್ನಾಗಿ ನಮ್ಮ ನಿರ್ಧಾರ ಏನಿದೆ ಎಂಬುದನ್ನು ಹೇಳಿದ್ದೇನೆ, ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳುವುದಾದರೆ ಸರ್ಕಾರ ಸಮಗ್ರವಾಗಿ ಒಂದು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡುವ ವಿಚಾರ ಇದೆ. ಅದನ್ನು ತೀವ್ರವಾಗಿ ತರಬೇಕು ಎನ್ನುವ ವಿಚಾರ ಸರ್ಕಾರಕ್ಕೆ ಇದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಈಗಾಗಲೇ ಡೆಲ್ಲಿ ಡೆವಲಪ್‌ಮೆಂಟ್ ಅಥಾರಿಟಿ ಕೆಲಸ ಮಾಡುತ್ತಿದೆ, ಹೋದಸಲ ನಾನು ಈ ಪ್ರಶ್ನೆಯನ್ನು ಮಾಡುತ್ತೇವೆಂದು ಹೇಳಿದಿರಿ, ಆದ್ದರಿಂದ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯನ್ನು ಯಾವಾಗ ಎಷ್ಟು ಜಾಗ್ರತೆಯಾಗಿ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಿ ?

ಶ್ರೀ ಡಿ. ಕೆ. ನಾಯ್ಕರ್ —ಬಿಲ್ ತಯಾರಾಗಿದೆ. ಪ್ರಿಂಟ್ ಆಗಿದೆ. ಸ್ಕ್ರುಟಿನಿ ಸಹ ಆಗಿದೆ. ಮುಂದೆ ಕ್ಯಾಬಿನೆಟ್ ಅಪ್ರೂವರ್ ಆಗಿ ಅದನ್ನು ಇಲ್ಲಿ ಇಂಟ್ರಡ್ಯೂಸ್ ಮಾಡುವ ಸ್ಟೇಜಿನಲ್ಲಿ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಸಿಟಿ ಮಾರ್ಕೆಟ್ ರನರ್ ಮಾರ್ಕೆಟ್ ಹಾಗೂ ಜಾನ್‌ಸನ್ ಮಾರ್ಕೆಟ್ ಬಗ್ಗೆ ಪ್ರಪೋಜಲ್ಸ್ ಎಷ್ಟು ದಿವಸಗಳಿಂದ ಕಾರ್ಪೋರೇಷನ್ ಮುಂದಿವೆ ? ಅವುಗಳನ್ನು ಯಾವಾಗ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಕೃಷ್ಣರಾಜ ಮಾರ್ಕೆಟ್‌ನ್ನು ಉತ್ತಮ ಪಡಿಸುವ ಬಗ್ಗೆ ಪ್ರಪೋಜರ್ಸ್‌ಗೆ ಅಪ್ರೂವರ್ ಕೊಟ್ಟಿದೆ. ಆವರ ಡಿಜೈನ್ಸ್ ಮತ್ತು ಎಸ್ಟಿಮೇಟ್ ಡಿಪಾರ್ಟ್‌ಮೆಂಟಿನಲ್ಲಿ ನಡೆಯುತ್ತಿದೆ. ರಸರ್ ಮಾರ್ಕೆಟ್‌ಮತ್ತು ಜಾನ್ಸನ್ ಮಾರ್ಕೆಟ್‌ಗಳ ಪ್ರಪೋಜಲ್ಸ್ ಇನ್ನೂ ನಮ್ಮ ಸರ್ಕಾರಕ್ಕೆ ಬಂದಿಲ್ಲ. ಅವು ಕಾರ್ಪೋರೇಷನ್‌ನಲ್ಲಿ ಪರಿಶೀಲನಾ ಹಂತದಲ್ಲಿವೆ.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಎರಡು ಮಾರ್ಕೆಟ್‌ಗಳನ್ನು ಉತ್ತಮ ಪಡಿಸುವ ಬಗ್ಗೆ ಪ್ರಪೋಜರ್ಸ್ ಕಾರ್ಪೋರೇಷನ್ ಪರಿಶೀಲನೆಯಲ್ಲಿವೆ ಎಂದು ಹೇಳಿದ್ದೀರಿ. ಈ ಮೂರು ಮಾರ್ಕೆಟ್‌ಗಳ ಅಭಿವೃದ್ಧಿ ಕೆಲಸಗಳನ್ನು ಸರ್ಕಾರದ ವತಿಯಿಂದ ಮಾಡಿಸುತ್ತೀರಾ ಅಥವಾ ಬೇರೆ ಯಾವುದಾದರೂ ಏಜೆನ್ಸಿಗಳ ಮುಖಾಂತರ ಮಾಡಿಸುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ಡಿಸೆಷನ್ಸ್ ಎಲ್ಲಾ ಮೇಟ್ ವರ್ಕ್‌ಔಟ್ ಆಗುತ್ತಿವೆ ಅವು ಬಂದ ನಂತರ ಯಾವರೀತಿ ಕಾರ್ಯಕ್ರಮ ಕೈಗೊಳ್ಳಬೇಕೆ ಎಂಬುದು ಗೊತ್ತಾಗುತ್ತದೆ.

ಅಧ್ಯಕ್ಷರು.—ಶ್ರೀ ಜಯ ಪ್ರಕಾಶ್‌ನಾರಾಯಣ್ ಅವರು ಪ್ರಶ್ನೆ ನಂ. 715 ಹಾಕಬಹುದು.

Continuation of Officials of Revenue Department in Bangalore (Rural) District Office

715. M. H. JAYAPRAKASH NARAYANA (Sirsi, [On behalf of Sri M. B. Ramaswamy (Anekal)]. —

Will the Minister for Revenue be pleased to state :—

(*a*) the number of offices and officials both executive and Ministerial working in the same offices of Revenue Department located in Bangalore (Rural) District for ten years and more ;

(*b*) the reasons for continuing them in the same office for such a long period ?

Sri N. HUTCHMASTHY GOWDA (Minister for Revenue).—

(*a*) One official.

(*b*) He has been continued on medical grounds.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—(ಅ) ಪ್ರಶ್ನೆಗೆ ಉತ್ತರವಾಗಿ ಒಬ್ಬ ನೌಕರ ಎಂಬುದಾಗಿ ಹೇಳಿದೆ. ಆದರೆ ಬೆಂಗಳೂರು ನಗರದಲ್ಲಿಯೇ ಇದ್ದುಕೊಂಡು ಈ ಆಫೀಸಿನಿಂದೆ ಆ ಆಫೀಸಿಗೆ ವರ್ಗಮಾಡಿಸಿಕೊಂಡು ಇರತಕ್ಕವರು ರೆವಿನ್ಯೂ ಆಫೀಸಿನಲ್ಲಿ 10 ವರ್ಷಕ್ಕಿಂತ ಹೆಚ್ಚಾಸಿ ಇರುವವರು ಎಷ್ಟು ಜನರಿದ್ದಾರೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಸದಸ್ಯರು ಪ್ರತ್ಯೇಕವಾದಂಥ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರವನ್ನು ಒದಗಿಸಿಕೊಡುತ್ತೇನೆ. ಈಗ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬೆಂಗಳೂರು ಗ್ರಾಮದ ಜಿಲ್ಲೆಯಲ್ಲಿ ಒಂದೇ ಆಫೀಸಿನಲ್ಲಿ 10ವರ್ಷಗಳಿಗಿಂತ ಮೇಲ್ಪಟ್ಟವರು ಎಷ್ಟು ಜನ ಇದ್ದಾರೆಂದು. ಆಷ್ಟಕ್ಕೆ ಮಾತ್ರ ಉತ್ತರ ಕೊಟ್ಟಿದ್ದೇನೆ. ಆದ್ದರಿಂದ ಪ್ರತ್ಯೇಕವಾದಂಥ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.— ಬೆಂಗಳೂರಿನಲ್ಲಿ ಎಷ್ಟು ರೆವಿನ್ಯೂ ಆಫೀಸುಗಳಿವೆ ? ಬೆಂಗಳೂರಿನಲ್ಲಿರತಕ್ಕ ರೆವಿನ್ಯೂ ಆಫೀಸುಗಳಲ್ಲಿ ಹತ್ತಾರು ವರ್ಷಗಳಿಂದಲೂ ಅಲ್ಲಲ್ಲಿ ಟ್ರಾನ್ಸ್‌ಫರ್‌ಮಾಡಿಕೊಂಡು ಅವರ ಪ್ರಭಾವ ಬೀರಿಕೊಂಡಿರತಕ್ಕ ಅಫಿಷಿಯರ್ಸ್ ಎಷ್ಟು ಜನರಿದ್ದಾರೆ ? ಅದರ ಬಗ್ಗೆ ಅಂಕಿಅಂಶಗಳನ್ನು ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಮೊದಲೇ ಹೇಳಿದಂತೆ ಅದರ ಬಗ್ಗೆ ಪ್ರತ್ಯೇಕವಾದಂಥ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನತದೃಷ್ಟ ಒಬ್ಬ ನೌಕರ ಎಂಬುದಾಗಿ ಹೇಳಿದ್ದೀರಿ. ಅವರ ಹೆಸರೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರ ಹೆಸರು ಮಾನ್ಯ ಶ್ರೀ ಪಿ. ನಂಜೀವಪ್ಪ, ಸೆಕೆಂಡ್ ಡಿವಿಜನ್ ಕ್ಲರ್ಕ್. ದೇವನಹಳ್ಳಿ ತಾಲ್ಲೂಕು ಆಫೀಸಿನಲ್ಲಿದ್ದಾನೆ.

ಶ್ರೀ ಸಿ. ಬೈರೇಗೌಡ.—ತಾಲ್ಲೂಕು ಆಫೀಸ್ ಒಂದು ವಿಷಯ ಮಾತ್ರ ಹೇಳುತ್ತಿದ್ದೀರಿ. ತಾಲ್ಲೂಕು ಆಫೀಸ್ ಒಂದೇ ಇಲ್ಲ. ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಒಟ್ಟು ಎಷ್ಟು ಜನ ಆ ರೀತಿ ಅಲ್ಲಲ್ಲಿ ಇದ್ದಾರೆ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಪ್ರಶ್ನೆ ಸ್ಪಷ್ಟವಾಗಿದೆ. ಅದಕ್ಕೆ ಸರಿಯಾಗಿ ಉತ್ತರ ಕೊಟ್ಟಿದ್ದೇನೆ. ಬೆಂಗಳೂರು ನಗರದಲ್ಲಿ ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ಎಷ್ಟು ಜನ 10 ವರ್ಷಗಳ ಅವಧಿಗಿಂತ ಹೆಚ್ಚಿಗೆ ಇದ್ದಾರೆ ಅವರೆಲ್ಲರೂ ಎಷ್ಟು ಕಾಲದಿಂದ ಇದ್ದಾರೆಂಬ ಬಗ್ಗೆ ಮಾನ್ಯ ಸದಸ್ಯರು ಪ್ರತ್ಯೇಕವಾದಂಥ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಒದಗಿಸಿಕೊಡುತ್ತೇನೆ.

MADAM SPEAKER.—Now Question Hour is oder.

QUESTION FOR ANSWERS ON THE DAY
(but not taken up)

Starting of Paper Mill in Chikkanayakanahalli Taluk

456. Sri N. BASAVAIAH (Chikknayakanahalli).—

Will the Minister for Industries and Parliamentary Affairs be pleased to state :—

(*a*) whether the Government would conduct survey regarding the possibility of manufacturing paper by utilising fibrous coat of coconut betel-nuts and banana stem and other raw materials available in Chickanayakanahalli taluk ;